ಮಾಡುತ್ತಿದ್ದವರು. ಪ್ರಯೋಗಶೀಲತೆಯ ಮೂಲಕವೇ ಅವರ ವೃತ್ತಿಬದುಕಿನ ಗ್ರಾಫ್ ಮೇಲಕ್ಕೇರುತ್ತಿದೆ. ಅವರ ಸಿನಿಮಾಗಳೂ ಚೆನ್ನಾಗಿ ಹಣ ಮಾಡುತ್ತಿವೆ. ಇಂಥದ್ದೊಂದು ಹೊಸ ಬಗೆಯ ಅಲೆ ಬೇರೆ ಚಿತ್ರರಂಗಗಳಲ್ಲಿ ಶುರುವಾಗಿದೆ' ಎನ್ನುವ ಹರೀಶ್ ನಮ್ಮಲ್ಲಿ ಮಾತ್ರ ಇನ್ನೂ ಅದೇ ಹಳೆಯ ಜಾಡಿನಲ್ಲಿ ಅಬ್ಬರಿಸಿ ಬೊಬ್ಬಿರಿಯುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸುತ್ತಾರೆ. ಇದೇ ಸಮಯದಲ್ಲಿ 'ಟಗರು' ಸಿನಿಮಾ ಮೂಲಕ ಸೂರಿ, ವಸಿಷ್ಠ ಸಿಂಹ ಮತ್ತು ಧನಂಜಯ್ ಅವರಂಥ ನಟರನ್ನು ಇಟ್ಟುಕೊಂಡು ಮಾಡಿರುವ ಪ್ರಯೋಗವನ್ನೂ ಅವರು ನೆನಪಿಸಿಕೊಳ್ಳುತ್ತಾರೆ.

## ಬದಲಾವಣೆಯ ಬೆಳ್ಳಿಗೆರೆ

ಜಡ್ಡು ಮನಸ್ಥಿತಿಯ ಜೋಂಪಿನಲ್ಲಿಯೇ ಗಾಂಧಿನಗರ ಮೈಮರೆತಿದ್ದಾಗಲೂ ದೂರದಲ್ಲೆಲ್ಲೋ ಹೊಸ ಧ್ವನಿಯ ಅಲಾರ್ಮ್ ಕೂಡ ಕೇಳಿಸುತ್ತಿದೆ. ಪುನೀತ್ ರಾಜ್‌ಕುಮಾರ್, ಶಿವರಾಜ್ ಕುಮಾರ್ ಅವರಂಥ ನಟರು ಹೊಸಬರ ಪ್ರಯತ್ನಕ್ಕೆ ಬೆಂಬಲವಾಗಿ ನಿಲ್ಲುತ್ತಿದ್ದಾರೆ. ಪುನೀತ್ ಅವರಂತೂ ತಮ್ಮದೇ ನಿರ್ಮಾಣ ಸಂಸ್ಥೆ ಆರಂಭಿಸಿ ಹೊಸ ನಿರ್ದೇಶಕರ ಸಿನಿಮಾಗಳನ್ನೇ ನಿರ್ಮಿಸುತ್ತಿದ್ದಾರೆ. ಸದ್ಯದಲ್ಲಿಯೇ ತಮ್ಮ ಬ್ಯಾನರ್ ಚಿತ್ರದಲ್ಲಿ ತಾವೇ ನಟಿಸುವ ಸೂಚನೆಯನ್ನೂ ನೀಡಿದ್ದಾರೆ. ರಕ್ಷಿತ್ ಶೆಟ್ಟಿ ಮತ್ತು ಪುಷ್ಕರ್ ಮಲ್ಲಿಕಾರ್ಜುನಯ್ಯ ಕೂಡ ಹಲವು ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುತ್ತಿದ್ದಾರೆ. ಇತ್ತ ಸತ್ಯಪ್ರಕಾಶ್ ಅವರು ಒಂದಿಷ್ಟು ಸಮಾನ ಮನಸ್ಕರ ಜತೆ ಸೇರಿಕೊಂಡು ನಿರಂತರ ಸಿನಿಮಾ ಕೃಷಿಗೆ ತೊಡಗಿಕೊಂಡಿದ್ದಾರೆ. ದರ್ಶನ್ ಹಲವು ಯುವ ಸಿನಿಕರ್ತರ ಸಿನಿಮಾ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಾಜ್ ಬಿ. ಶೆಟ್ಟಿ ಮೊದಲ ಸಿನಿಮಾ ಯಶಸ್ಸಿನ ಭೂಮಿಯ ಮೇಲೆ ಮತ್ತಿಷ್ಟು ಪ್ರಯೋಗದ ಬೆಳೆ ಬೆಳೆಯುವ ಪ್ರಯತ್ನದಲ್ಲಿದ್ದಾರೆ.



ಎಲ್ಲ ಬಗೆಯ ಪಾತ್ರಗಳಿಗೂ ಸೈ ಎನ್ನುವ ತೆಲುಗಿನ ರಾಮ್‌ಚರಣ್

ಇವೆಲ್ಲದರ ಜೊತೆಗೆ ಹಣ ಜೋಡಿಸಿಕೊಂಡು ತಮ್ಮಿಷ್ಟದ, ತಮ್ಮ ಶೈಲಿಯ ಸಿನಿಮಾಗಳನ್ನೇ ಮಾಡುತ್ತೇನೆ ಎಂಬ ಹಟ–ವ್ಯಾಮೋಹದಿಂದ ಚಿತ್ರರಂಗಕ್ಕೆ ಅಡಿಯಿಡುತ್ತಿರುವ ಹೊಸ ಪೀಳಿಗೆಯ ಉತ್ಸಾಹವೂ ಕಮ್ಮಿಯೇನಿಲ್ಲ. ಈ ಪೀಳಿಗೆಯ ಹಲವರು ಸಿನಿಮಾವನ್ನು ಕನ್ನಡದ ಗಡಿಯಾಚೆ ಜಗತ್ತಿನ ಪರಿಪ್ರೇಕ್ಷ್ಯದಲ್ಲಿ ಕಂಡು ಕಲಿತವರು. ಕನ್ನಡದ ಪ್ರೇಕ್ಷಕ ಜಗತ್ತಿನ ಒಳ್ಳೆಯ ಸಿನಿಮಾ ನೋಡಿದ ಪ್ರಬುದ್ಧ ಎಂಬ ಅರಿವು ಇರುವವರು. ಹೊಸಬರು ಹುಟ್ಟಿಸಬಹುದಾದ ಈ ಅಲೆ ಕುಗ್ಗದ ಹಾಗೆ ಉಳಿದರೆ ಸ್ಟಾರ್ ನಟರು, ನಿರ್ದೇಶಕರ ದೃಷ್ಟಿಯೂ ಇತ್ತ ಹೊರಳಬಹುದು. ಹೊಸ ಅಲೆಯ ಬಲ ಹೆಚ್ಚಿಸುವ ಮನಸ್ಸು ಅವರಿಗೂ ಬರಬಹುದು. ಹಾಗಾಗಿ ಇಮೇಜಿನ ಹಂಗು ತೊರೆದು ಪಾತ್ರಕ್ಕೆ ಶರಣು ಹೋಗುವ ಕಾಲ ಬಂದರೆ ಅಲ್ಲಿಂದ ಕನ್ನಡ ಸಿನಿಮಾಗಳ ಹೊಸ ಸುಗ್ಗಿ ಆರಂಭವಾಗಬಹುದು. ಆಗ ಸೂರಿ ಬಯಸಿದ 'ಪೈಪೋಟಿ ನೀಡುವ ಕಾಲ' ಬರಬಹುದು. ಸದ್ಯಕ್ಕಂತೂ ಹೀಗೆ ಹಲವು 'ರೆ'ಗಳಲ್ಲಿಯೇ ಈ ಚರ್ಚೆಯನ್ನು ಮುಗಿಸಬೇಕಾದ ಪರಿಸ್ಥಿತಿ ಇದೆ.

ಒಂದೊಮ್ಮೆ ಈಗ ಚಿತ್ರರಂಗದ ಅಡ್ಡರಸ್ತೆಗಳಲ್ಲಿ ಕಂಡುಬರುತ್ತಿರುವ ಸಣ್ಣ ಸಂಚಲನಕ್ಕೆ ಗಾಂಧಿನಗರದ ಮುಖ್ಯರಸ್ತೆ ಕುರುಡಾಗಿಯೇ ಉಳಿದುಬಿಟ್ಟರೆ 'ಕನ್ನಡದ ಸಿನಿಮಾವನ್ನು ಕನ್ನಡಿಗರು ನೋಡಲೇಬೇಕು', 'ಪರಭಾಷೆ ಸಿನಿಮಾ ಹೊಗಳುವವರು ಕನ್ನಡದ್ರೋಹಿಗಳು', 'ಟೀಕೆ ಮಾಡುವವರು ಸಾಧ್ಯವಾದರೆ ಒಂದು ಸಿನಿಮಾ ಮಾಡಿ ತೋರಿಸಲಿ' – ಇಂಥ ಮಾತುಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುತ್ತಾ, ಅದರ ಮೇಲೆ ಗಾಡಿ ಓಡಿದಾಗ ಏಳುವ ದೂಳು ತಿನ್ನುತ್ತಾ ಉಳಿಯಬೇಕಾಗುತ್ತದೆ ಅಷ್ಟೇ.

ಇನ್ನು ಮೇಲಾದರೂ ನಮ್ಮ ತಾರಾ ವರ್ಚಸ್ಸಿನ ನಟರು ಮಂದಗತಿಯನ್ನು ಬಿಟ್ಟು ವರ್ಷಕ್ಕೆ ಕನಿಷ್ಠ ಎರಡು ಸಿನಿಮಾಗಳಲ್ಲಾದರೂ ನಟಿಸದೇ ಹೋದರೆ ಹಾಗೂ ವಿಭಿನ್ನ ಪಾತ್ರಗಳಿಗೆ ತಮ್ಮನ್ನು ತೆರೆದುಕೊಳ್ಳದೆ ಹೋದರೆ ಗಾಂಧಿನಗರದ ಬರಗಾಲ ಮತ್ತಷ್ಟು ಪ್ರಖರವಾಗಲಿದೆ. ಇದು ಸಹಜವಾದ ಬರಗಾಲ ಆಗಿರದೆ, ಚಿತ್ರ ನಿರ್ಮಾತೃಗಳು ಹಾಗೂ ತಾರೆಗಳು ಸ್ವಯಂ ಸೃಷ್ಟಿಸಿದ ಬರಗಾಲ ಆಗಲಿದೆ.

